**ಶ್ರೀ ಪಿ.ಆರ್. ರಮೇಶ್ ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 330 ರಡಿ ಮಂಡಿಸಿರುವ ಈ ಕೆಳಕಂಡ ಗಮನ ಸೆಳೆಯುವ ಸೂಚನೆಗೆ ಮಾನ್ಯ ಲೋಕೋಪಯೋಗಿ ಸಚಿವರ ಉತ್ತರ**

"ಕುಣಿಗಲ್ ತಾಲ್ಲೂಕು ಅಮೃತೂರು ಹೋಬಳಿ, ಹೊಸೂರು, ಹಂಪಾಪುರ ರಾಗಿಹಳ್ಳಿ, ಕಿತ್ತಘಟ್ಟ, ಕುರುಬರಶೆಟ್ಟಿಹಳ್ಳಿ ಮತ್ತು ಕಾಚೇನಹಳ್ಳಿ ಗ್ರಾಮಸ್ಥರು ಸಂಪರ್ಕ ರಸ್ತೆ ಇಲ್ಲದೇ ಸುಮಾರು 22 ಕಿ.ಮೀ. ಮಾರ್ಕೋನಹಳ್ಳಿ ಕೆರೆಯನ್ನು ಬಳಸಿಕೊಂಡು ಗ್ರಾಮವನ್ನು ತಲುಪಬೇಕಾಗಿರುತ್ತದೆ. ಸದರಿ ಗ್ರಾಮಗಳಿಂದ ಪ್ರತಿನಿತ್ಯ ಶಾಲಾ ವಿದ್ಯಾರ್ಥಿಗಳು, ರೈತರು ಮತ್ತು ವಯಸ್ಸಾದ ಸಾರ್ವಜನಿಕರು ಆಸ್ಪತ್ರೆಗೆ ಹೋಗಲು ಬಹಳ ಕಷ್ಟಕರವಾಗಿದ್ದು, ಈ ಬಗ್ಗೆ ಸರ್ಕಾರಕ್ಕೆ ನಿರಂತರ ಮನವಿ ಸಲ್ಲಿಸಿದ್ದರೂ ಈವರೆಗೂ ಸಂಪರ್ಕ ರಸ್ತೆಯನ್ನು ನಿರ್ಮಾಣ ಮಾಡಿಕೊಟ್ಟಿರುವುದಿಲ್ಲ.

ಆದ್ದರಿಂದ ವೈ ಹೊಸಹಳ್ಳಿಯಿಂದ ಹಂಪಾಪುರ ಮಧ್ಯೆ ಸುಮಾರು 600.00 ಮೀಟರ್ ಉದ್ದದ ಸಂಪರ್ಕ ಸೇತುವೆಯನ್ನು ನಿರ್ಮಾಣ ಮಾಡಿಕೊಡುವ ಬಗ್ಗೆ"

**ಉತ್ತರ** : ಕುಣಿಗಲ್ ತಾಲ್ಲೂಕು ಅಮೃತೂರು ಹೋಬಳಿಯ ಹಂಪಾಪುರ ರಾಗಿಹಳ್ಳಿ, ಕಿತ್ತಘಟ್ಟ, ಕುರುಬರಶೆಟ್ಟಿಹಳ್ಳಿ, ಕಾಚೇನಹಳ್ಳಿ ಗ್ರಾಮಗಳು ಮಾರ್ಕೋನಹಳ್ಳಿ ಜಲಾಷಯದ ಹಿನ್ನೀರಿಗೆ ಹೊಂದಿಕೊಂಡಿರುವ ಗ್ರಾಮಗಳಾಗಿದ್ದು ಸದರಿ ಗ್ರಾಮಗಳು ಸಂಪರ್ಕ ರಸ್ತೆಯನ್ನಾಗಿ ಕುಣಿಗಲ್ ತಾಲ್ಲೂಕಿನ ಹಂಪಾಪುರ ರಾಗಿಹಳ್ಳಿ ಜಿಲ್ಲಾ ಮುಖ್ಯ ರಸ್ತೆಯನ್ನು ಬಳಸುತ್ತಾರೆ. ಸದರಿ ರಸ್ತೆಯು ರಾಷ್ಟ್ರೀಯ ಹೆದ್ದಾರಿ 75ಕ್ಕೆ ಸಂಪರ್ಕ ಹೊಂದಿದ್ದು ಸುಮಾರು 6.00 ಕಿ.ಮೀ ಉದ್ದವಿರುತ್ತದೆ.

ಕುಣಿಗಲ್ ತಾಲ್ಲೂಕು ಯಡಿಯೂರು ಹೊಸಹಳ್ಳಿಯಿಂದ ಹಂಪಾಪುರ ಸಂಪರ್ಕಕ್ಕೆ ಮಾರ್ಕೋನಹಳ್ಳಿ ಜಲಾಷಯದ ಒಳಹರಿವಿನ ಶಿಂಷಾ ನದಿಯು ಅಡ್ಡಲಾಗಿದ್ದು, ಪ್ರಸಕ್ತ ಸ್ಥಳದಲ್ಲಿ ಯಾವುದೇ ಸಂಪರ್ಕ ಸೇತುವೆ ಹಾಗೂ ಸಂಪರ್ಕ ರಸ್ತೆ ಇರುವುದಿಲ್ಲ. ಸುಮಾರು 600.00 ಮೀಟರ್ ಉದ್ದದ ಸೇತುವೆ ಹಾಗೂ 1500.00 ಮೀಟರ್ ಉದ್ದಕ್ಕೆ ರಸ್ತೆ ನಿರ್ಮಾಣ ಮಾಡಿದರೆ ಯಡಿಯೂರು ಹೊಸಹಳ್ಳಿ ಮತ್ತು ಹಂಪಾಪುರ ಸಂಪರ್ಕ ಕಲ್ಪಿಸಬಹುದಾಗಿರುತ್ತದೆ. ಸಂಪರ್ಕ ಸೇತುವೆ ನಿರ್ಮಿಸಲು ಸುಮಾರು ರೂ.70.00 ಕೋಟಿ ಹಾಗೂ ರಸ್ತೆ ನಿರ್ಮಾಣ ಮಾಡಲು ಸುಮಾರು ರೂ.5.00 ಕೋಟಿ ಹೀಗೆ ಒಟ್ಟಾರೆಯಾಗಿ ರೂ.75.00 ಕೋಟಿ ಅನುದಾನದ ಅವಶ್ಯವಿರುತ್ತದೆ. ಸಂಪರ್ಕ ಸೇತುವೆ ಮತ್ತು ರಸ್ತೆಯನ್ನು ನಿರ್ಮಿಸುವ ಬಗ್ಗೆ ತಾಂತ್ರಿಕ ಶಕ್ಯತೆ ಹಾಗೂ ಅನುದಾನದ ಲಭ್ಯತೆಯನುಸಾರ ಪರಿಶೀಲಿಸಿ, ಅಗತ್ಯ ಕ್ರಮಕೈಗೊಳ್ಳಲಾಗುವುದು.

ಲೋಇ 94 ಸಿಕ್ಯೂಎನ್ 2022(ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು